ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 223
ಮಾನ್ಯ ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ : 14.12.2021.

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	2020-2021ನೇ ಸಾಲಿನ ಉದ್ಯೋಗಿನಿ ಯೋಜನೆಯಡಿಯಲ್ಲಿ ಬೀದರ್ ಉತ್ತರ ಮತ್ತು ಬೀದರ್ ದಕ್ಷಿಣದಲ್ಲಿ ಆಯ್ಕೆ ಸಭೆಯನ್ನು ಕರೆಯದೆ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಮಾಡಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ, ಅದರ ಮಾಹಿತಿ ನೀಡುವುದು)	• 2020-21ನೇ ಸಾಲಿನ ಉದ್ಯೋಗಿನಿ ಯೋಜನೆಯಡಿ ಉತ್ತರ ಮತ್ತು ದಕ್ಷಿಣ ಕ್ಷೇತ್ರದ ಫಲಾನುಭವಿಗಳಿಂದ ಸ್ವೀಕರಿಸಲಾದ ಅರ್ಜಿಗಳ ಕುರಿತು ಆಯ್ಕೆಗಾಗಿ ಆಯ್ಕೆ ಸಮಿತಿ ಸಭೆಗೆ ದಿನಾಂಕ: ನಿಗದಿಪಡಿಸಲು ಕೋರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಪತ್ರ ಸಂಖ್ಯೆ: ಶಿಅಯೋಬಿ : ಉದ್ಯೋಗಿನಿ : ಸಂದ : 2020-21, ದಿನಾಂಕ:29.03.2021ರಲ್ಲಿ ಮಾನ್ಯ ಶಾಸಕರು, ಬೀದರ ಉತ್ತರ ಮತ್ತು ದಕ್ಷಿಣ ಇವರಿಗೆ ಕೋರಿ ಮನವಿ ಮಾಡಿರುತ್ತಾರೆ. (ಪತ್ರವನ್ನು ಲಗತ್ತಿಸಿದೆ) • ಉದ್ಯೋಗಿನಿ ಯೋಜನೆಯಡಿ 2020-21ನೇ ಸಾಲಿನಲ್ಲಿ ಫಲಾನುಭವಿಗಳ ಆಯ್ಕೆಗಾಗಿ ಸ್ವೀಕರಿಸಲಾದ ಅರ್ಜಿಗಳ ಕುರಿತಂತೆ ಮಾನ್ಯ ಶಾಸಕರು, ಬೀದರ ಉತ್ತರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 11.06.2021 ರಂದು ಹಾಗೂ ಮಾನ್ಯ ಶಾಸಕರು, ಬೀದರ ದಕ್ಷಿಣ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:15.06.2021 ರಂದು ಆಯ್ಕೆ ಸಮಿತಿ ಸಭೆ ನಡೆದಿದ್ದು, ಸದರಿ ಸಮಿತಿ ಸಭೆಯ ನಡವಳಿಯನ್ನು ಹಾಗೂ ಆಯ್ಕೆ ಪಟ್ಟಿಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.
ಆ)	ಬಂದಿದ್ದಲ್ಲಿ, ಇಲಾಖೆಯ ವಿರುದ್ಧ ತೆಗೆದುಕೊಂಡ ಕ್ರಮಗಳೇನು:	ಅನ್ವಯಿಸುವುದಿಲ್ಲ
ಇ)	2020-21 ರಿಂದ 2021-22ನೇ ಸಾಲಿನಲ್ಲಿ ಜಿಲ್ಲೆಗೆ ಯಾವ ಯಾವ ಯೋಜನೆಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ? (ಮಾಡಿದ್ದಲ್ಲಿ, ವಿವರವಾದ ಮಹಿತಿಯನ್ನು ಒದಗಿಸುವುದು)	2020-21ರಿಂದ 2021-22ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಬೀದರ್ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಸಂಖ್ಯೆ: ಮಮಇ/100/ಮಅನಿ/2021

Halappa B A

(ಹಾಲಪ್ಪ ಬಸಪ್ಪ ಆಚಾರ್)

ಮಾನ್ಯ ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ

ಬ್ಯಾಂಕ್ ಕಾಲೋನಿ ರಸ್ತೆ, ರಾಂಪೂರೆ ಕಾಲೋನಿ, ಬೀದರ, ☎: 08482-233115, ✉: cdpobdr@gmail.com

ಸಂಖ್ಯೆ: ಶಿಅಯೋಬಿ:ಉದ್ಯೋಗಿನಿ:ಸಂದ:2020-21 ದಿನಾಂಕ: 29-03-2021

ಇವರಿಗೆ,
ಮಾನ್ಯ ಶಾಸಕರು
ಬೀದರ ಉತ್ತರ ಕ್ಷೇತ್ರ, ಬೀದರ

ಮಾನ್ಯರೇ,

ವಿಷಯ: 2020-21ನೇ ಸಾಲಿನ ಉದ್ಯೋಗಿನಿ ಯೋಜನೆಯಡಿ ಉತ್ತರ ಮತಕ್ಷೇತ್ರದಲ್ಲಿ ಫಲಾನುಭವಿಗಳಿಂದ ಸ್ವೀಕರಿಸಲಾದ ಅರ್ಜಿಗಳ ಕುರಿತು ಆಯ್ಕೆಗಾಗಿ ಸಂದರ್ಶನ ಏರ್ಪಡಿಸಲು ದಿನಾಂಕ ನಿಗದಿಪಡಿಸುವ ಬಗ್ಗೆ

* * * * * * *

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನ ಉದ್ಯೋಗಿನಿ ಯೋಜನೆಯಡಿ ಉತ್ತರ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಒಟ್ಟು 255 ಅರ್ಜಿಗಳು ಸ್ವೀಕೃತಗೊಂಡಿರುತ್ತವೆ. ಅದರಂತೆ ಸದರಿ ಅರ್ಜಿದಾರರಿಗೆ ಸಂದರ್ಶನ ಏರ್ಪಡಿಸಿ ಅರ್ಹ ಫಲಾನುಭವಿಗಳಿಗೆ ಆಯ್ಕೆ ಮಾಡಲು ದಿನಾಂಕವನ್ನು ನಿಗದಿ ಪಡಿಸಬೇಕಾಗಿರುತ್ತದೆ.

ಅದರಂತೆ ಮಾನ್ಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ ರವರು ಆದಷ್ಟು ಬೇಗನೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಆಯ್ಕೆ ಪಟ್ಟಿಯನ್ನು ಪ್ರಧಾನ ಕಚೇರಿಗೆ ಸಲ್ಲಿಸಲು ಸೂಚಿಸಿರುತ್ತಾರೆ. ಇಲ್ಲದಿದ್ದರೆ ಬಿಡುಗಡೆಯಾಗಿರುವ ಅನುದಾನವನ್ನು ಹಿಂಪಡೆಯಲಾಗುವುದೆಂದು ತಿಳಿಸಿರುತ್ತಾರೆ.

ಪ್ರಯುಕ್ತ ಉದ್ಯೋಗಿನಿ ಯೋಜನೆಯ ಆಯ್ಕೆ ಸಮಿತಿಯ ಅಧ್ಯಕ್ಷರಾದ ತಾವು ಸದರಿ ಅರ್ಜಿದಾರರಿಗೆ ಸಂದರ್ಶನವನ್ನು ಏರ್ಪಡಿಸಲು ಸೂಕ್ತ ದಿನಾಂಕವನ್ನು ನಿಗದಿಪಡಿಸಲು ಕೋರುತ್ತಾ, ತಮ್ಮ ದಯಾಪರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗುತ್ತಿದೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ

Received at MLA office Bidar

OFFICE OF THE (N) MLA BIDAR ☎ 224880

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಬೀದರ ಹಾಗೂ ಸದಸ್ಯ ಕಾರ್ಯದರ್ಶಿಗಳು
ಉದ್ಯೋಗಿನಿ ಯೋಜನೆ, ಆಯ್ಕೆ ಸಮಿತಿ, ಬೀದರ

ಪ್ರತಿಯನ್ನು:

1) ಮಾನ್ಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಕಚೇರಿಯ ಕಡತಕ್ಕೆ

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಮೈಲೂರ ಕ್ರಾಸ್ ಬೀದರ